ಪ್ರಧಾನ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

ಸಿ.ಸಿ.3255/2024

ಚಾಸಾ: 13  ಪ್ರಾಸಾ:8

ದಿನಾಂಕಃ 02.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು– | ತ್ಯಾಗರಾಜ್ |
| ತಂದೆಯ ಹೆಸರು– | ಮುನಿವೆಂಕಟಪ್ಪ |
| ವಯಸ್ಸು – | 29  ವರ್ಷ |
| ಉದ್ಯೋಗ– | ಪೋಲೀಸ್ ಉಪ ನಿರೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, |
| ವಾಸ– | ಬಂಗಾರಪೇಟೆ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನಾನು ದಿನಾಂಕ 05.09.2013 ರಿಂದ 06.05.2015 ರವರಗೆ ಪಿ.ಎಸ್.ಐ. ಆರ್ ಪೇಟೆ ಪೋಲೀಸ್ ಠಾಣೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ **30.07.2024** ರಂದು ಸಂಜೆ **6.15** ಗಂಟೆಗೆ ನಾನು ಠಾಣೆಯಲ್ಲಿ ಇರುವಾಗ ಚಾಸಾ–1 ರವರು ಠಾಣೆಗೆ ಹಾಜರಾಗಿ ಆರೋಪಿ ಕೃತ್ಯಕ್ಕೆ ಬಳಸಿದ ಕತ್ತಿಯನ್ನು ಹಾಜರುಪಡಿಸಿ ಕಾನೂನು ಕ್ರಮ ಕೈಗೊಳ್ಳಲು ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯನ್ನು ನಾನು ಸ್ವೀಕರಿಸಿ ನಮ್ಮ ಠಾಣಾ ಮೊಕದ್ದಮೆ ಸಂಖ್ಯೆ 92/2024 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಅದರ ಪ್ರತಿಗಳನ್ನು ನಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ಈಗಾಗಲೇ ನಿಪಿ–1 ಎಂದು ಗುರುತಿಸಿದ್ದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ–8 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು.

3. ನಂತರದಲ್ಲಿ  ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಚಾಸಾ–11 ಮತ್ತು 12 ರವರ ಬೆಂಗಾವಲಿನಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರದಲ್ಲಿ 31.07.2024 ರಂದು ಚಾಸಾ–5 ಮತ್ತು 6 ರವರನ್ನು ಠಾಣೆಗೆ ಕರೆಸಿಕೊಂಡು, ಚಾಸಾ–1 ಮತ್ತು ಆರೋಪಿಯ ಸಮಕ್ಷಮ ಚಾಸಾ–1 ರವರು ಹಾಜರುಪಡಿಸಿದಂತಹ ಕತ್ತಿಯನ್ನು ಮಧ್ಯಾಹ್ನ 1.00 ರಿಂದ 2.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸದರಿ ಮಹಜರ್ ನ್ನು ನಿಪಿ–2 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ–2(ಡಿ) ಎಂದು ಗುರುತಿಸಲಾಯಿತು. ನಿಪಿ–2 ರಲ್ಲಿ ಇರುವ ಚಾಸಾ–9 ಮತ್ತು 10 ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಪಿ–2(ಇ) ಮತ್ತು ನಿಪಿ–2(ಎಫ್) ಎಂದು ಗುರುತಿಸಲಾಯಿತು.

ನಂತರದಲ್ಲಿ ಅಮಾನತ್ತುಪಡಿಸಿಕೊಂಡಂತಹ ಕತ್ತಿಯನ್ನು ಮಾಲುಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

4. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ಹಾಜರಿದ್ದು ಚಾಸಾ-7 ಮತ್ತು 8 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸದರಿ ಮಹಜರ್ ನಿಪಿ-3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಇರುವ ಚಾಸಾ-9 ಮತ್ತು 10 ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಪಿ-3(ಡಿ) ಮತ್ತು ನಿಪಿ-3(ಇ) ಎಂದು ಗುರುತಿಸಲಾಯಿತು. ನಂತರದಲ್ಲಿ ಚಾಸಾ-2 ರಿಂದ 8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

5. ನಂತರದಲ್ಲಿ ದಿನಾಂಕ 30.07.2024 ರಂದು ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರದಲ್ಲಿ ದಿನಾಂಕ 06.08.2024 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ.

ಈ ದಿನ ಆರೋಪಿಯು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಅವರ ಪರ ವಕೀಲರು ಅವರ ಪರವಾಗಿ ವಿನಾಯಿತಿ ಅರ್ಜಿ ಹಾಕಿದ್ದು ವಿನಾಯಿತಿ ಅರ್ಜಿಯಲ್ಲಿ ಸಾಕ್ಷಿಯು ಗೈರು ಹಾಜರಿದ್ದ ಆರೋಪಿಯನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಅಂತ ಹೇಳಿದ ಕಾರಣ ಸಾಕ್ಷಿಯು ಗೈರು ಹಾಜರಿದ್ದ ಆರೋಪಿಯನ್ನು ಗುರುತಿಸುತ್ತಾರೆ ಅಂತ ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1. ಚಾಸಾ-2 ರಿಂದ 8 ರವರು ನನ್ನ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸುಳ್ಳು. ಆರೋಪಿ ನಾನು ಹೇಳುವ ಹಾಗೆ ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸುಳ್ಳು. ನಮ್ಮ ಠಾಣೆಗೆ ಸಂಬಂಧಿಸಿದ ತನಿಖೆಲ್ಲಿರುವ ಪ್ರಕರಣಗಳಿಗೆ ಚಾಸಾ-1 ಮತ್ತು 2 ರವರನ್ನು ನೇಮಿಸಿರುತ್ತೇನೆ. ಚಾಸಾ-1 ಮತ್ತು 2 ರವರನ್ನು ಪ್ರತ್ಯೇಕವಾಗಿ ನೇಮಿಸುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಠಾಣೆಯ ದಿನಚರಿಯಲ್ಲಿ ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ. ಚಾಸಾ-1 ಮತ್ತು 2 ರವರು ಆರೋಪಿಯನ್ನು ಹಿಡಿದ್ದಂತಹ ಸ್ಥಳದಲ್ಲಿ ಮಹಜರ್ ಮಾಡಿರುತ್ತೇನೆ. ಚಾಸಾ-1 ರವರು ಸ್ಥಳದಲ್ಲಿ ಅಮಾನತ್ತು ಮಹಜರ್ ಮಾಡಿರುವುದಿಲ್ಲ. ಮು. ಮಾ.1 ರಲ್ಲಿ ಪಂಚರ ಸಹಿಯುಳ್ಳ ಚೀಟಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಠಾಣೆಯ ಮಾಲು ಪಟ್ಟಿ ಸಂಖ್ಯೆಯನ್ನು ಮು.ಮಾ.1 ರಲ್ಲಿ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಪೋಲೀಸ್

ಠಾಣೆಗೆ ಸಂಬಂಧಿಸಿದಂತೆ ದಾಖಲಾಗುವ ಎಲ್ಲಾ ಪ್ರಕರಣಗಳ ಬಗ್ಗೆ ಎಸ್.ಪಿ. ಯವರಿಗೆ ಸ್ಟೇಟ್ ಮೆಂಟ್ ಕಳುಹಿಸುತ್ತೇವೆ ಎಂದರೆ ಸರಿ. ನಮ್ಮ ಠಾಣೆಯ ಅಂಕಿ-ಅಂಶದ ಸಲುವಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸುಳ್ಳು. ನಾನು ಠಾಣೆಯಲ್ಲಿಯೇ ಮಹಜರ್ ಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಜಯಲಕ್ಷ್ಮೀ ಎನ್. ಬಿ)
ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್